ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 31-34
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಶಾಸನಗಳಲ್ಲಿ ಸಂಪ್ರದಾಯ ಮತ್ತು ಆಚರಣೆಗಳು

**ಮುಮ್ತಾಜ್ ಬೇಗಂ ಕನಕಗಿರಿ**

ಸಂಶೋಧನಾ ವಿದ್ಯಾರ್ಥಿ, ಕರ್ನಾಟಕ ರಾಜ್ಯ ಅಕ್ಕ ಮಹಾದೇವಿ ವಿಶ್ವವಿದ್ಯಾಲಯ, ವಿಜಯಪುರ.

**Abstract:**

*ಜನಪದ ಸಂಸ್ಕೃತಿಯು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದ ರೂಢಿಯಾಗಿದೆ. ಜನಪದ ಸಂಸ್ಕೃತಿಯಲ್ಲಿ ಹಲವಾರು ಸಂಪ್ರದಾಯ ಮತ್ತು ಆಚರಣೆಗಳನ್ನು ಕಾಣುತ್ತೇವೆ. ಈ ಸಂಸ್ಕೃತಿಯು ತನ್ನದೇ ಆದ ಆಯಾಮವನ್ನು ಹೊಂದಿದೆ. ಈ ಭಾರತೀಯ ಸಂಸ್ಕೃತಿಯಲ್ಲಿ ಜನಪದರು ನಡೆಸಿಕೊಂಡು ಬಂದ ಸಂಪ್ರದಾಯಗಳು ಎಂದರೆ ಮನೆಗೆ ಬಂದ ಅತಿಥಿಗಳಿಗೆ ಕಾಲು ತೊಳೆಯಲು ನೀರು ಕೊಡುವುದರಿಂದ ಹಿಡಿದು ಅವರಿಗೆ ತಲೆಬಾಗಿ ನಮಸ್ಕರಿಸುವುದರ ಮೂಲಕ ಅವರ ಉಪಚಾರ ಮಾಡುವುದು ನಮ್ಮ ಜನಪದ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಪ್ರಸ್ತುತ ಲೇಖನದಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವ ಜನಪದ ಸಂಪ್ರದಾಯ ಮತ್ತು ಆಚರಣೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಜನಪದ ಸಂಸ್ಕೃತಿ, ಶಾಸನಗಳು, ಸಂಪ್ರದಾಯ ಮತ್ತು ಆಚರಣೆಗಳು.*

**ಪೀಠಿಕೆ**

ಹಿಂದೂ ಸಂಸ್ಕೃತಿಯಲ್ಲಿ ಹೆಣ್ಣು ಹಣೆಗೆ ಬೊಟ್ಟಿಟ್ಟು ತಲೆಗೆ ಹೂ ಮುಡಿದು ದೇವರಿಗೆ ಭಕ್ತಿಯಿಂದ ಪೂಜೆ ಸಲ್ಲಿಸುವ ತನಕ ನಮ್ಮ ಜನಪದ ಸಂಸ್ಕೃತಿಯು ಕಾಣಸಿಗುತ್ತದೆ. ಆದರೆ ಆಧುನಿಕತೆ ಬೆಳೆದಂತೆಲ್ಲ ಕೆಲವು ಸಾಂಪ್ರದಾಯಿಕ ಆಚರಣೆಗಳು ಮಾಯವಾಗಿ ಪಾಶ್ಚಾತ್ಯ ಸಂಸ್ಕೃತಿಗೆ ಜನರು ವಾಲಿರುವುದು ಕಂಡುಬರುತ್ತದೆ. ಜನಪದ ಸಂಪ್ರದಾಯ ಮತ್ತು ಆಚರಣೆಗಳು ಎಂದರೆ ಒಂದು ರೀತಿಯ ಸಂಭ್ರಮ. ಈ ಆಚರಣೆಗಳು ಜನರ ನಡುವೆ ಖುಷಿಯನ್ನುಂಟು ಮಾಡುತ್ತದೆ. ಜಾನಪದ ಎಂಬ ಪದವು ಆಂಗ್ಲಭಾಷೆಯ Folklore ಎಂಬ ಪದದ ಸಂವಾದಿಯಾಗಿದೆ. ಜಾನಪದವು ಜನಪದಗೀತೆ, ಜನಪದ ನೃತ್ಯ, ಜನಪದ ಸಂಗೀತ, ಜನಪದ ಆಟ, ಜನಪದ ವೈದ್ಯಕೀಯ ಎಲ್ಲವನ್ನು ಒಳಗೊಂಡಿದೆ.

ಜಿ.ಶಂ.ಪರಮಶಿವಯ್ಯನವರು 'ನಾಗರಿಕತೆಗೂ ಮೂಲವಾದ, ಶಿಷ್ಟ ಸಂಸ್ಕೃತಿಯಿಂದ ದೂರವಾದ ಪರಂಪರಾನುಗತವಾದ ಬೆಳವಣಿಗೆಗಳು ಪಡೆದ ಜನ ಸಮುದಾಯದ ವಿಶಿಷ್ಟ ಸಂಸ್ಕೃತಿಯೇ ಜಾನಪದ' ಎಂದು ಹೇಳಿದ್ದಾರೆ.[1] "ಜಾನಪದ ಸಂಪ್ರದಾಯ ಮತ್ತು ಆಚರಣೆಗಳು ತುಂಬಾ ವೈವಿಧ್ಯತೆಯಿಂದ ಕೂಡಿದೆ.ಸಮಾಜದಸಮಷ್ಠಿಯಲ್ಲಿ ಹಿಡಿದುಕೊಂಡಿರುವ ಸಂಪತ್ತು ಎನ್ನಬಹುದು. ಜಾನಪದ ಸೊಗಡಿನಲ್ಲಿರುವ ಉಗ್ರ ಆಚರಣೆಗಳ ಬಗ್ಗೆ ಹಾಗೂ ಪೂರ್ವ ಪಾರಂಪರಿಕ ಕೇಂದ್ರ ಹೊಂದಿರುವ ಜಾನಪದ ಸಂಪ್ರದಾಯಗಳು ಹಾಗೂ ಆಚರಣೆಗಳ ಬಗ್ಗೆ ಶಾಸನಗಳಲ್ಲಿ ತಿಳಿಸಲಾಗಿದೆ. ಅವುಗಳಲ್ಲಿ ಕೆಲವೊಂದಿಷ್ಟು ನೋಡುವುದಾದರೆ ಜೋಳವಾಳಿ ವೇಳಾಬಾಳಿ ಸೂರ್ಯಗ್ರಹಣದಂದು, ಚಿತ್ತ ಪ್ರವೇಶ

**Please cite this article as:** ಮುಮ್ತಾಜ್ ಬೇಗಂ ಕನಕಗಿರಿ. (2024). ಶಾಸನಗಳಲ್ಲಿ ಸಂಪ್ರದಾಯ ಮತ್ತು ಆಚರಣೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 31–34.

ಬೆರಳುಗಳನ್ನು ಕತ್ತರಿಸುವುದು ಇನ್ನೂ ಅನೇಕ ರೀತಿ ಆಚರಣೆಗಳು ಕಂಡುಬರುತ್ತವೆ. ಇಂತಹ ಉಗ್ರ ಆಚರಣೆಗಳನ್ನು ಅಂದಿನ ಜನರು ನಿಂತು ನೋಡುತ್ತಿದ್ದರು ಅಂದಿನ ಆಚರಣೆಗಳು ಅತ್ಯಂತ ಭಯಾನಕವೂ ಹೌದು ಜನರಲ್ಲಿ ಗಾಬರಿ ಹುಟ್ಟಿಸುವಂತಹ ನೋಡುವ ಜನರಿಗೆ ಮುಜುಗರ. ಆಚರಣೆಗಳನ್ನು ನೋಡಲು ಸಾವಿರಾರು ಜನರು ನೆರೆದಿರುತ್ತಿದ್ದರು. ಕೆಲವು ಆಚರಣೆಗಳು ಕರ್ನಾಟಕದಲ್ಲಿಯೂ ಬಳಕೆಯಲ್ಲಿದ್ದವು"[2]

ಪ್ರಾಚೀನ ಕಾಲದಿಂದಲೂ ಸಹ ಮಾನವನು ಧಾರ್ಮಿಕ ಹಾಗೂ ಸಾಂಸ್ಕೃತಿಕ ವಲಯಗಳಲ್ಲಿ ನಂಬಿಕೆ, ಹರಕೆ, ಆಚರಣೆ ಸಂಪ್ರದಾಯವಾಗಿ ಮನೆ ಮಾಡಿಕೊಂಡಿದ್ದನ್ನು ಹಬ್ಬ ಹರಿದಿನ ಜಾತ್ರೆ ಎಂದು ಆಯಾ ದೇವತೆಗಳ ಹೆಸರಿನಲ್ಲಿ ಹರಕೆ ಹೊತ್ತು ಕೊಳ್ಳುತ್ತಿದ್ದರು. ಆದರೆ ಶಾಸನಗಳಲ್ಲಿ ಉಲ್ಲೇಖಿಸಿದಂತೆ ಒಬ್ಬ ರಾಜನ ಋಣವನ್ನ ಹೇಗೆ ತೀರಿಸಬೇಕು ರಾಜನಿಗೆ ನನ್ನಿಂದ ಏನು ಮಾಡಲು ಸಾಧ್ಯ ಎಂದು ತಿಳಿದು ರಾಜನಿಗೆ ತನ್ನ ಪ್ರಾಣವನ್ನು ಅರ್ಪಿಸುವುದು. ಇದರಿಂದ ರಾಜನ ನಿಷ್ಠೆಯನ್ನು ಆ ಊರಿನ ಜನರು ಹೇಗೆ ಪಾಲಿಸುತ್ತಿದ್ದರು ಎಂಬುದನ್ನ ಇಲ್ಲಿ ತಿಳಿಯುವುದು ಸಾಧ್ಯವಾಗುತ್ತದೆ.

ಬರಗಾಲದ ಸಂದರ್ಭದಲ್ಲಿ ಅನೇಕ ಜನಪದರು ಆಹಾರ ಸಂಗ್ರಹಣ ಕಾರ್ಯವನ್ನು ಮಾಡುತ್ತಿದ್ದರು. ಎಂಬುದರ ಉಲ್ಲೇಖವು "ಮೌರ್ಯರ ಕಾಲದ ಶಾಸನಗಳಲ್ಲಿ ಉಲ್ಲೇಖಗಳಿವೆ ಎಂಬುದು ತಿಳಿದು ಬರುತ್ತದೆ. ಬರಗಾಲ ಬರುವುದಕ್ಕೂ ಮುಂಚೆ ಜನಪದರು ಬೇಟೆಯಾಡುವುದು ದವಸ ಧಾನ್ಯಗಳನ್ನ ಮುಂಚಿತವಾಗಿ ಸಂಗ್ರಹಿಸಿಕೊಳ್ಳುವಂತಹ ರೂಢಿ ಅವರಲ್ಲಿ ಕಂಡುಬರುತ್ತದೆ. ಇದರಲ್ಲಿ ಊರಿನ ಗುಲಾಮಿ ಜನಪದ ವರ್ಗ ಒಂದು ರೂಪಗೊಂಡಿರುವುದು ತಿಳಿದು ಬರುತ್ತದೆ".[3] ಕ್ರಿ.ಶ 1228ರ ಸೌಂದರ್ಯ ಶಾಸನದಲ್ಲಿ ಒಬ್ಬ ರಾಣಿಯು ಮನೆಗೆ ಬಂದ ಅತಿಥಿಗಳಿಗೆ ಹೇಗೆ ಸತ್ಕಾರ ಮಾಡಿದಳು ಎಂಬುದರ ಉಲ್ಲೇಖವಿದೆ. ಹಾಗೂ ಗಂಡನು ಚಟಕ್ಕೆ ಒಳಗಾದಾಗ ಅವನನ್ನು ತನ್ನದೇ ರೀತಿಯ ಪದ ಔಷಧ ಪದ್ಧತಿಯಿಂದ ಗುಣಮುಖ ಮಾಡಿದಳು ಎಂಬುದರ ಉಲ್ಲೇಖ ತಿಳಿದು ಬರುತ್ತದೆ."[4] ಅಣ್ಣಮ್ಮವೆಗ್ಗಡೆಯ ಮಗಳು ಹೊನ್ನಿಯವೆ ಎಂಬುವವಳು ಬಡ್ಡಿ ವ್ಯವಹಾರ ಮಾಡುವ ರೂಢಿಯನ್ನು ಇಟ್ಟುಕೊಂಡಿದ್ದಳು. ಇವಳು ದೇವರಿಗೆ ಒಡವೆ ವಸ್ತ್ರ ಕೊಡುವ ಸಂಪ್ರದಾಯವಿತ್ತು. ಬಡ್ಡಿ ವ್ಯವಹಾರ ಮಾಡಿ ಬಂದ ನಶೆಯಿಂದ ಹರಿಹರ ದೇವರಿಗೆ ಗದ್ಯಾನ ಒಂದರ ಬಡ್ಡಿಗೆ ಹೂಮಾಲೆ ಮೂರರ ಮಟ್ಟಿಗೆ ನಂದಾದೇವಿಗೆ ಒಟ್ಟು ನಾಲ್ಕು ಗದ್ಯಾಣ ಬಿಟ್ಟಿರುವೆಂದು ಕ್ರಿ.ಶ. 1255ರ ಹರಿಹರದ ಶಾಸನದಲ್ಲಿ ಉಲ್ಲೇಖವಿದೆ. ಇದೆ ಶಾಸನದಲ್ಲಿ ಆಕೆಯ ದಾನಗುಣ ಸಂಪ್ರದಾಯ ಕುರಿತು ಕೊಂಡಾಡಿರುವ ಬಗ್ಗೆಯೂ ಕೂಡ ಉಲ್ಲೇಖವಿದೆ.[5]

ಕ್ರಿ.ಶ. 1228ರ ಚೆನ್ನರಾಯಪಟ್ಟಣದ ಕೆಂಬಾಳು ಗ್ರಾಮದಲ್ಲಿ ದೊರೆತ ಶಾಸನದಲ್ಲಿ "ಮಲ್ಲಿಕಾರ್ಜುನ ದೇವರಿಗೆ ದಾಸ ತಮ್ಮಡಿಯನೆಂಬವ ದೇವ ತೊತ್ತೆಂದು ಉಲ್ಲೇಖವಿದೆ."[6] ಅಂದರೆ ತನ್ನ ಸ್ವಂತ ತಂಗಿಯನ್ನು ದೇವರಿಗೆ ದಾನವನ್ನಾಗಿ ಕೊಟ್ಟ ಎಂಬ ಸಂಪ್ರದಾಯದ ಕುರಿತು ತಿಳಿಸಲಾಗಿದೆ. ಊರಿಗೆ ಬರುವ ಸಾಂಕ್ರಾಮಿಕ ರೋಗಗಳ ನಿವಾರಣೆಗಾಗಿ ಜನರು ದೇವತೆಗಳನ್ನು ಪೂಜಿಸುವುದು ಹಾಗೂ ದೇವತೆಗಳು ಮೈ ಮೇಲೆ ಬರುವುದು ಎಲ್ಲಾ ಹಳ್ಳಿಗಳಲ್ಲೂ ಸಾಮಾನ್ಯವಾಗಿ ಕಾಣಬಹುದಾಗಿದೆ. ಇಂತಹ ನಂಬಿಕೆಗಳು ಇಂದಿಗೂ ಇವೆ ಹಾಗೂ ಶತಮಾನಗಳ ಹಿಂದೆಯೂ ಇದ್ದವು. ಈ ಅಂಶವು ಕೂಡ ಅನೇಕ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದಾಗಿದೆ. "ವಿಷ್ಣುವರ್ಧನನು ತಲಕಾಡಿನ ನದಿಯ ಮೇಲೆ ದಾಳಿ ಮಾಡಿದಾಗ ಅವನ ಸಹನೆ ಭಾಷೆಯನ್ನು ನುಗ್ಗಿ ಹೋರಾಡಿ ಜೋಳವಾಳಿಯನ್ನು ಮರಳಿ ಪಡೆಯುತ್ತಾನೆ. ಶ್ರೀ ನರಸಿಂಗ ದೇವನ ಪಟ್ಟ ಧರಿಸಿಯಾದಾಗ ಚೌಕ ಗೌಡ ಎಂಬಾತನು ಜೋಳ ಬಾಳಿಗಂ ವಾ(ವೇ)ಳೇವಾಳಿಗಂ ಮಡಿದು ಸುರಲುಕ

ಪ್ರಾಪ್ತನಾಗುತ್ತಾನೆ. ಅವನು ವೇಳಾಬಾಳಿಯ ಆದ್ದರಿಂದ ಆತ್ಮಹತ್ಯೆಯನ್ನು ಮಾಡಿಕೊಂಡನು"[7] ಜೋಳವಾಳಿಯಲ್ಲಿ ಆತ್ಮಹತ್ಯೆಯ ಪ್ರಶ್ನೆಯೇ ಹೇಳುವುದಿಲ್ಲ ಅನ್ನದ ಋಣಕ್ಕಾಗಿ ಯುದ್ಧದಲ್ಲಿ ಹೋರಾಡುವುದು ಮುಖ್ಯ. ಯುದ್ಧದಲ್ಲಿ ಮಡಿಯಬಹುದು ಅಥವಾ ಗೆದ್ದು ಹಿಂದಕ್ಕೆ ಬರಬಹುದು. ಆತ್ಮಹತ್ಯೆಯ ಪ್ರಶ್ನೆ ಬರುವುದು ವೇಳಾವಾಳಿಯಲ್ಲಿ. ಒಡೆಯನಿಗೆ ಅನ್ನದ ಋಣವನ್ನು ತೀರಿಸಲು ಅಂದಿನ ಕಾಲದ ಸೇವಕರು ರಾಜನಿಗೆ ತಮ್ಮ ಪ್ರಾಣವನ್ನು ಪಣಕ್ಕಿಟ್ಟು ಹೋರಾಡುವುದು ಈ ಸಂಪ್ರದಾಯದ ವಿಷ್ಣುವರ್ಧನನ ತಲಕಾಡಿನ ಒಂದು ಶಾಸನದಲ್ಲಿ ಉಲ್ಲೇಖವಾಗಿರುವುದು ಕಂಡು ಬರುತ್ತದೆ.

ಕ್ರಿ.ಶ. 864ರ ಶಾಸನದಲ್ಲಿ ದೇಹ ತ್ಯಾಗವನ್ನು ಮಾಡಿದ ವ್ಯಕ್ತಿಯೊಬ್ಬನ ಕುರಿತು ಪ್ರಶಂಸೆಯಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ. 8655ರ ಮೇವುಂಡ ಶಾಸನವು ವೇಳಾಬಾಳಿತನವನ್ನು ಕುರಿತು ಖಚಿತವಾಗಿ ಪ್ರಸ್ತಾಪಿಸುವ ಮೊಟ್ಟಮೊದಲ ಶಾಸನವಾಗಿದೆ. ರೆಡ್ಡಿ ಅಣ್ಣ ಎಂಬ ಬೆಳವಾಡಿಚನನ್ನು ಕುರಿತು ಶಾಸನವೊಂದರಲ್ಲಿ "ತಂದೆಯತಾಯಿ ವಿರಸಂತಾನಮ ನುಳಿದು ಬಿಸುಟೊಂ ಮಗುವಾರ್ತೆಗೊಳನ್ ತನ್ನನಳ್ವಾತ ಸಯೆ (ಸಾಯಲು) ಬಾರಿನ್" ಎಂದರೆ ಅವನ ನಿಜವಾದ ತಂದೆ ತಾಯಿ ಅರಸನೇ ಎಂದು ಪ್ರತಿಜ್ಞೆ ಮಾಡಿ ಸಾಯುವುದಾಗಿ ಹೇಳಿದ[8] ಕರ್ನಾಟಕದಲ್ಲಿ ಈ ಸಂಪ್ರದಾಯವು ಪ್ರಬಲವಾಗಿತ್ತೆಂದು ಈ ಶಾಸನಗಳ ಮೂಲಕ ತಿಳಿದು ಬರುತ್ತದೆ. ವೇಳಾಬಾಳಿ ಸಂಪ್ರದಾಯ ಕುರಿತು ಶಾಸನಗಳಲ್ಲಿ ಬಹುಮುಖ್ಯವಾದ ಶಾಸನವೆಂದರೆ ದೊಡ್ಡ ಹುಂಡಿ ಶಾಸನವಾಗಿದೆ. "ಗರುಡ ಎಂಬ ಸಂಪ್ರದಾಯವನ್ನು ನಾವು ಹೊಯ್ಸಳರ ಕಾಲದಲ್ಲಿ ಗರುಡ ಎಂಬ ಪದವು ಉತ್ಪತ್ತಿಯಾಗಿರುವುದು ಕಂಡು ಬರುತ್ತದೆ,"[9] ಗರುಡನ ಸಂಪ್ರದಾಯವು ತನ್ನ ತುತ್ತ ತುದಿಯನ್ನು ಮುಟ್ಟಿದ್ದು 13ನೆಯ ಶತಮಾನದಲ್ಲಿ ಎಂದು ತಿಳಿದು ಬರುತ್ತದೆ. ಆಗ ಈ ಹೆಸರಿನ ಸಂಪ್ರದಾಯದ ಹುಟ್ಟು ಮತ್ತು ಬೆಳವಣಿಗೆಯ ಇತಿಹಾಸವು ಅಧ್ಯಯನಕ್ಕೆ ಬಂದಿರುವುದಾಗಿ ತಿಳಿದು ಬರುತ್ತದೆ "ಕ್ರಿ.ಶ. 1040ರ ಶಾಸನದಲ್ಲಿ ಜಗದೇಕ ಮಲ್ಲನ ಸಾಮಂತ ಆಗಿರುವಂತಹ ಎದೆಯವರಸನನ್ನು ಸಿಂಗನ ಗರುಡಂ ಎಂದು ಘಟ್ಟಿಯರಸನನ್ನು ಸಾಮಂತ ಗರುಡ ಎಂದು ಶಾಸನದಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ"[10]

ಈ ಸಂಪ್ರದಾಯ ಯಾವ ರೀತಿಯದ್ದು ಎಂದರೆ ರಾಜನು ಸಾವಿನ ಬಳಿಕ ಆ ಧೀಮಂತ ಸೇವಕರು ಆತ್ಮಹತ್ಯೆಯನ್ನು ಮಾಡಿಕೊಂಡವರ ವ್ಯಕ್ತಿತ್ವವನ್ನು ಸೂಚಿಸುವಂತಹ ಸಂಪ್ರದಾಯವಾಗಿ ಗರುಡ ಸಂಪ್ರದಾಯವು ಕಂಡುಬರುತ್ತದೆ. ಗರುಡ ಸಂಪ್ರದಾಯದ ಚಿತ್ರವು ಹೊಯ್ಸಳರ ಶಾಸನಗಳಲ್ಲಿ ಉಲ್ಲೇಖವಾಗಿರುವುದನ್ನು ಕಾಣಬಹುದು. ಗರುಡಕ್ಕೆ ಮತ್ತೊಂದು ಹೆಸರು ಎಂದರೆ ಲೆಂಕೆ. ಶಾಸನದಲ್ಲಿ "ಕ್ರಿ.ಶ. 1257 ಶಾಸನದಲ್ಲಿ ಹಾಗೂ 1292ರ ಶಾಸನದಲ್ಲಿ "ಬೇರೆ ಬೇರೆ ಹೊಯ್ಸಳ ದೊರೆಗಳು ಪ್ರಾಣತ್ಯಾಗ ಮಾಡಿದಾಗ ಇಲ್ಲವೇ ಮಡಿದಾಗ ಅವರ ಜೊತೆಯಲ್ಲಿಯೇ ಅನೇಕ ಲೆಕ್ಕ ಅಥವಾ ಲೆಂಥಿಯರು ಗಜ ಮಸ್ತಕದಲ್ಲಿ ಅನೇಕ ಬಾರಿ ಗರುಡನ ನಪಿ ಬಾಸಿಯಂ ಪೊರೈಸದ ಎಂದರೆ ಮಡಿದ ವಿಷಯವು ಉಲ್ಲೇಖವಾಗಿರುವುದು ತಿಳಿಯುವುದು."[11] ಇದು ರಾಜನಿಗೋಸ್ಕರ ಅರಮನೆಯ ರಾಣಿಯಿಂದ ಹಿಡಿದು ಸೇವಕರು ರಾಜನಿಗೆ ಕೊಡುತ್ತಿದ್ದ ಗೌರವಾರ್ಥವಾಗಿ ಈ ಸಂಪ್ರದಾಯವನ್ನು ಮಾಡುತ್ತಿದ್ದರು. ಸೂರ್ಯ ಗ್ರಹಣದಂದು ಚಿತ್ತ ಪ್ರವೇಶ ಮಾಡುವಂತಹ ಸಂಪ್ರದಾಯ ಆಚರಣೆಯು ಸುಮಾರು "ಕ್ರಿ.ಶ.1141ರ ಶಾಸನದಲ್ಲಿ ಸೂರ್ಯಗ್ರಹಣ ದೊರೆಯಾದಂತಹ ಕೊಳೆ ತೆಲುಂಗದ ಮಲ್ಲಂ ಸುರಗಣಿಕೆಯ ಸೂರ್ಯ ಲೋಕಕ್ಕೆ ಹೋದ ಸೂರ್ಯಾ ಎಂಬ ಉಲ್ಲೇಖವಿದೆ. ಇದು ಸೂರ್ಯ ಗ್ರಹಣದ ದಿನ ಜನ ಹೀಗೆ ದೇಹ ತ್ಯಾಗ ಮಾಡುತ್ತಿದ್ದರು ಎಂಬುದಕ್ಕೆ ಅನೇಕ ಉದಾಹರಣೆಗಳುಈ ಶಾಸನದಲ್ಲಿ ತಿಳಿದುಬರುತ್ತದೆ."[12]

ಸಿಡಿ ತಲೆ ಎಂಬ ಆಚರಣೆಯನ್ನು ಕುರಿತು ಕ್ರಿ.ಶ. 1066ರ ಶಾಸನದಲ್ಲಿ ಉಲ್ಲೇಖವಾಗಿದೆ. ಈ

ಶಾಸನದಲ್ಲಿ ಸಿಡಿ ಕಲ್ಲನ್ನು ಹೆಸರಿಸಲಾಗಿದೆ[13] ಇದರ ಹಿಂದೆ ಒಂದು ಅರಸ ಮನೆತನದ ಕಥೆಯಿದೆ. ಮಹಾಸಮಂತ ಅರಸನ ರಾಣಿಯಾದ ಮಾಯದೇವಿಯು ಗರ್ಭಿಣಿಯಾಗಿರುತ್ತಾಳೆ. ಆಗ ಅವಳು ಗಂಡು ಮಗುವಿಗೆ ಜನನ ನೀಡಬೇಕು ಎಂದು ಕೆಲವರ ಇಷ್ಟವಾಗಿರುತ್ತದೆ. ಮಾಯಾದೇವಿಯ ಗಂಡನಾದ ಬೊಪ್ಪರಸನ ಆಸೆಯೂ ಕೂಡ ಅದೇ ಆಗಿರುವುದರಿಂದ ಅವನು ಕೊಂಡಸ ಬಾವಿಯ ಬ್ರಹ್ಮದೇವನಿಗೆ ಸಿಡಿತಲೆಯನ್ನು ಕೊಡುವುದಾಗಿ ಬೇಯಕೆಯ ನಾಯಕನು ಹರಸಿಕೊಳ್ಳುತ್ತಾನೆ. ಅದೇ ರೀತಿ ರಾಣಿಗೆ ಗಂಡು ಮಗು ಜನನವಾಗುತ್ತದೆ. ಹರಕೆಯ ಪ್ರಕಾರ ಸಿಡಿ ತಲೆಯನ್ನ ಕೊಡಲು ಸಿದ್ಧನಾಗುತ್ತಾನೆ. ಸಿಡಿ ತಲೆ ಎಂದರೆ ಸಿಡಿತಲೆ ಕೊಡಬೇಕಾದ ವ್ಯಕ್ತಿಯು ಧ್ಯಾನಭಂಗಿಯಲ್ಲಿ ಕುಳಿತುಕೊಳ್ಳುತ್ತಾನೆ. ಅವನ ಜುಟ್ಟಿಗೆ ನೆಲದಲ್ಲಿ ಹೂಳಿದ ಗಳುವೊಂದನ್ನು ಬಾಗಿಸಿ ಕಟ್ಟುತ್ತಾರೆ. ಅವನ ತಲೆಯನ್ನು ಇನ್ನೊಬ್ಬನು ಕತ್ತಿಯಿಂದ ಹಾರಿಸಿದಾಗ ತಲೆ ಮೇಲಕ್ಕೆ ಸಿಡಿಯುತ್ತದೆ. ಇದು ಸಿಡಿತಲೆ ಕೊಡುವ ವಿಧಾನವಾಗಿದೆ ಪ್ರಾಣವು ಒಂದೇ ಸಮಯದಲ್ಲಿ ಹಾರಿಹೋಗುತ್ತದೆ. ಇವರ ಆ ಭಕ್ತಿಯು ತುಂಬಾ ಶ್ರೇಷ್ಠವಾದದ್ದು.

**ಸಮಾರೋಪ**

ಕನಕಗಿರಿ ಪರಿಸರದ ಸಂಪ್ರದಾಯ ಮತ್ತು ಆಚರಣೆಗಳ ಹಿನ್ನೆಲೆಯಲ್ಲಿ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ, ಎಷ್ಟೆಲ್ಲಾ ಸಮಾಜಮುಖಿ ಬದಲಾವಣೆಗಳನ್ನು ಗಮನಿಸಬಹುದು. ಧಾರ್ಮಿಕ ವಿಧಿ ವಿಧಾನಗಳು ತಮ್ಮ ಮೂಲಸ್ಥಿತಿಯನ್ನು ಬಿಟ್ಟು ಬದಲಾದ ವಾತಾವರಣದಲ್ಲಿ ತಮ್ಮ ಮೂಲ ಚಿಂತನೆಯಿಂದಲೂ ಕೂಡ ಮಹತ್ತರ ಬದಲಾವಣೆಗಳಾಗಿವೆ. ಆಧುನಿಕತೆಯ ಪರಿಣಾಮ ದಿಂದ ಮರೆಯಾಗುತ್ತಿರುವ ಸಾಂಸ್ಕೃತಿಕ ಆಚರಣೆಗಳು ಮರೆಯಾಗಿ ನಮ್ಮ ಮೂಲ ಜನಪದ ಸಂಸ್ಕೃತಿ ಅತಿ ಹೆಚ್ಚು ತನ್ನ ಇರುವಿಕೆಯನ್ನು ಕಳೆದುಕೊಳ್ಳುತ್ತಿದೆ. ಮಹತ್ತರವಾದ ಜನಪದ ನಂಬಿಕೆಗಳು, ಆಚರಣೆಗಳು ಮರೆಯಾಗಿ, ಆಧುನಿಕರಣದಿಂದ ಹಲವಾರು ತಂತ್ರಜ್ಞಾನಕ್ಕೆ ಬಲಿಯಾಗಿ ಎಲ್ಲವೂ ಕೂಡ ಬದಲಾಗುತ್ತಿವೆ.

**ಕೊನೆಟಿಪ್ಪಣಿ**

1. ಪರಮಶಿವಯ್ಯ ಜಿ.ಶಂ. *ಸಮಗ್ರ ಜಾನಪದ ಮತ್ತು ಸೃಜನಶೀಲ ಸಾಹಿತ್ಯ ಮಾಲೆ.* ಪು.ಸಂ.369
2. ತಾರಿಹಳ್ಳಿ ಹನುಮಂತಪ್ಪ. *ಕರ್ನಾಟಕದ ಉಗ್ರ ಆಚರಣೆಗಳು.* ಪು.ಸಂ.63
3. ಅದೇ. ಪು.ಸಂ. 44
4. ಅದೇ. ಪು.ಸಂ. 27
5. ಅದೇ. ಪು.ಸಂ. 28
6. ಅದೇ. ಪು.ಸಂ. 28
7. ಅದೇ. ಪು.ಸಂ. 05
8. ಅದೇ. ಪು.ಸಂ. 07
9. ರಾಮಚಂದ್ರೇಗೌಡ ಹಿ.ಶಿ. (1995). *ಜಾನಪದ.* ಪು.ಸಂ. 59
10. ಅದೇ. ಪು.ಸಂ. 60
11. ಅದೇ. ಪು.ಸಂ. 63.
12. ತಾರಿಹಳ್ಳಿ ಹನುಮಂತಪ್ಪ. ಪೂರ್ವೋಕ್ತ. ಪು.ಸಂ. 10
13. ರಾಮಚಂದ್ರೇಗೌಡ ಹಿ.ಶಿ. (1995). ಪೂರ್ವೋಕ್ತ. ಪುಟ.ಸಂ – 36

**ಪರಾಮರ್ಶನ/ಆಕರ ಗ್ರಂಥಗಳು**


- ಹೆಗಡೆ ಎಂ.ಎ. (2016*). ಹಿಂದೂ ಸಂಸ್ಕಾರಗಳು.* ಶಾರದ ಹೆಚ್. ವೈ. ಪ್ರಕಾಶನ.
- ರಾಮಚಂದ್ರೇಗೌಡ ಹಿ.ಶಿ. (1995). *ಜಾನಪದ* 1995 – ಕುವೆಂಪು ಅಧ್ಯಯನ ಸಂಸ್ಥೆ.
- ರುದ್ರಮೂರ್ತಿ ಶಾಸ್ತ್ರಿ (2012). *ಹಿಂದು ರೀತಿ ನೀತಿಗಳು ಪದ್ಧತಿಗಳು ಮತ್ತು ಆಚರಣೆಗಳು.* ಐಬಿಎಚ್ ಪ್ರಕಾಶನ.
- ಶಂಕರನಾರಾಯಣ, ತೀ. ನಂ. (1997). *ಜಾನಪದ ಕೈಪಿಡಿ.* ಕನ್ನಡ ಪುಸ್ತಕ ಪ್ರಾಧಿಕಾರ.
- ವೀರಣ್ಣ ದಂಡೆ. (2004). *ಜನಪದ ಕಾವ್ಯ ಮೀಮಾಂಸೆ ಹಾಗೂ ವಿಮರ್ಶಾ ಪ್ರಸ್ಥಾನಗಳು.* ಕವಿಮಾರ್ಗ ಪ್ರಕಾಶನ.